ಎಂ.ಎಸ್. ಶ್ರೀರಾಮ್



# ಪ್ರಧಾನ ಮಂತ್ರಿಗಳ ತುಮುಲ–ದ್ವಂದ್ವಗಳು

ಆರು ಪ್ರಧಾನಮಂತ್ರಿಗಳ ನೀತಿರೂಪಕಲ್ಪನೆಯ ಹಿಂದಿನ ರಾಜಕೀಯವನ್ನು ಅರ್ಥ ಮಾಡಿಕೊಳ್ಳಲು ಈ ಪುಸ್ತಕ ಭಿನ್ನ ಚೌಕಟ್ಟನ್ನೂ, ಅದರ ಮೂಲಕ ಭಿನ್ನ ದೃಷ್ಟಿಕೋನವನ್ನೂ ಒದಗಿಸಿಕೊಡುತ್ತದೆ.

ನಮ್ಮ ನಿತ್ಯಜೀವನವನ್ನು ಪ್ರಭಾವಿಸುವ ಮಹತ್ವದ ನಿರ್ಧಾರಗಳನ್ನು ಅಧಿಕಾರದಲ್ಲಿರುವವರು ಮಾಡುತ್ತಾರೆ. ಸಾರ್ವಜನಿಕ ನೀತಿಯಲ್ಲಿ ಕೆಲಸ ಮಾಡುವವರಿಗೆ, ನೀತಿರೂಪಕಲ್ಪನೆಯಲ್ಲಿ ಸಾಕಷ್ಟು ಮಾಹಿತಿಯನ್ನು ಉಪಯೋಗಿಸಿ, ಯೋಜನಾಬದ್ಧವಾಗಿ ಲಾಭ-ನಷ್ಟಗಳನ್ನು ಪರಿಶೀಲಿಸಿ, ಬಹುಜನರ ಹಿತಾಸಕ್ತಿಯಿಂದ ದೊಡ್ಡ ನಿರ್ಧಾರಗಳನ್ನು ಅಧಿಕಾರದಲ್ಲಿರುವವರು ಕೈಗೊಳ್ಳುತ್ತಾರೆಂಬ ಭ್ರಮೆಯಿದೆ. ಬಹುಶಃ ಅನೇಕ ನೀತಿಗಳ ರೂಪಕಲ್ಪನೆಯಲ್ಲಿ ಇದು ನಿಜವೂ ಇರಬಹುದು. ಆದರೆ ನಮ್ಮ ದೇಶದ ರಾಜಕೀಯದ ದಿಕ್ಕನ್ನು ಬದಲಿಸಿದ ಹಲವು ನಿರ್ಧಾರ ಮತ್ತು ನಿಲುವುಗಳು ತಕ್ಷಣದ ರಾಜಕೀಯ ಲೆಕ್ಕಾಚಾರ ಮತ್ತು ತಕ್ಷಣಕಾಲದಲ್ಲಿ ಸರ್ಕಾರವನ್ನು, ಅಧಿಕಾರವನ್ನು, ಕುರ್ಚಿಯನ್ನು ಬಚಾಯಿಸುವುದಕ್ಕೆ ಮಾಡಿದ್ದಿರಬಹುದು ಎಂದರೆ ನಂಬಲು ಕಷ್ಟವಾಗುತ್ತದೆ. ಆದರೆ ಈ ರೀತಿಯ ರಾಜಕೀಯದ ನಡುವೆಯೂ ದೇಶ ಒಂದಾಗಿ ಮುಂದುವರೆಯುತ್ತಿರುವುದಕ್ಕೆ ದೈವೀಶಕ್ತಿಯೇ ಕಾರಣವಿರಬಹುದು ಎಂದು ನಾಸ್ತಿಕರೂ ನಂಬಬೇಕು. ನೀರಜಾ ಚೌಧುರಿಯವರ 'ಹೌ ಪ್ರೈಮ್ ಮಿನಿಸ್ಟರ್ಸ್ ಡಿಸೈಡ್' ಎನ್ನುವ ಪುಸ್ತಕ ಆರು ಪ್ರಧಾನಮಂತ್ರಿಗಳ ಕಾರ್ಯಕಾಲದಲ್ಲಿ ತೆಗೆದುಕೊಂಡ ಮಹತ್ವದ ತೀರ್ಮಾನಗಳು, ನೀತಿರೂಪಕಲ್ಪನೆಗಳು ಮತ್ತು ಅದರ ಹಿಂದಿರುವ ರಾಜಕೀಯ ಲೆಕ್ಕಾಚಾರ, ಶಿಷ್ಟಾಚಾರ, ದುರಾಚಾರಗಳನ್ನು ಅವಲೋಕಿಸಿ ತುಲನಾತ್ಮಕವಾದ ವಿಶ್ಲೇಷಣೆಯನ್ನು ಕೊಡುತ್ತದೆ. ನೀತಿರೂಪಕಲ್ಪನೆಯ ಹಿಂದಿನ ರಾಜಕೀಯವನ್ನು ಅರ್ಥ ಮಾಡಿಕೊಳ್ಳಲು ಈ ಪುಸ್ತಕ ಭಿನ್ನ ಚೌಕಟ್ಟನ್ನೂ, ಅದರ ಮೂಲಕ ಭಿನ್ನ ದೃಷ್ಟಿಕೋನವನ್ನೂ ಒದಗಿಸಿಕೊಡುತ್ತದೆ.

ಪುಸ್ತಕ ಇಂದಿರಾ ಗಾಂಧಿಯವರೊಂದಿಗೆ ಪ್ರಾರಂಭವಾಗುತ್ತದೆ. ಇಂದಿರಾಗಾಂಧಿಯ ಕಾಲದಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣದಿಂದ ಹಿಡಿದು ಅನೇಕ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲಾಯಿತಾದರೂ, ನೀರಜಾ ಚೌಧುರಿ ತಮ್ಮ ಬರವಣಿಗೆಯನ್ನು ತುರ್ತು ಪರಿಸ್ಥಿತಿ, ಅದರ ರಾಜಕೀಯ ಮತ್ತು ಇಂದಿರಾ ಗಾಂಧಿ 1980ರಲ್ಲಿ ಮತ್ತೆ ಕಾಂಗ್ರೆಸ್ ಪಕ್ಷವನ್ನು ಗೆಲುವಿನತ್ತ ಒಯ್ದು ಪ್ರಧಾನ ಮಂತ್ರಿಯ ಸ್ಥಾನವನ್ನಾಕ್ರಮಿಸಿದ ಕಥೆಯನ್ನು ವಿವರಿಸುತ್ತಾರೆ. ಇಂದಿರಾ ಗಾಂಧಿಯ ಕಾರ್ಯಕಾಲದಲ್ಲಿ ಮಹತ್ವದ ಪಾತ್ರವನ್ನು ಸಂಜಯ್